**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್ ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ನೀಡುವ ಬಗ್ಗೆ.**

**ವಿಷಯ:**

ಬಾಗಲಕೋಟೆ ಜಿಲ್ಲೆಯಲ್ಲಿರುವ ಏಕೈಕ ಸಹಕಾರಿ ಸಕ್ಕರೆ ಕಾರ್ಖಾನೆಯಾಗಿರುವ ಮುಧೋಳ ತಾಲ್ಲೂಕಿನ ರನ್ನ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭ ಮಾಡಬೇಕೆಂದು ಒತ್ತಾಯಿಸಿ ಕಳೆದ 45 ದಿನಗಳಿಂದ ಅನಿರ್ದಿಷ್ಟ ಹೋರಾಟ ನಡೆಯುತ್ತಿದ್ದು, ಈ ಭಾಗದ ರೈತರ ಆಶಯದಂತೆ ಈ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಹಸ್ತಾಂತರಿಸದೆ ಪುನರಾರಂಭ ಮಾಡುವ ಬಗ್ಗೆ ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

**ಸರ್ಕಾರದ ಉತ್ತರ:**

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು 2500 ಟಿ.ಸಿ.ಡಿ (TONS OF CANE PER DAY) ಸಾಮರ್ಥ್ಯದೊಂದಿಗೆ ಕಬ್ಬು ಅರೆಯುವ ಪ್ರಾಯೋಗಿಕ ಹಂಗಾಮನ್ನು 1999ರಲ್ಲಿ ಪ್ರಾರಂಭಿಸಲಾಗಿರುತ್ತದೆ. ಸದರಿ ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರವು ಬಾಗಲಕೋಟೆ ಜಿಲ್ಲೆಯ ಮುಧೋಳ, ಜಮಖಂಡಿ, ಬಾಗಲಕೋಟೆ, ಬೀಳಗಿ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿ ಇರುತ್ತದೆ. 2012-13ನೇ ಸಾಲಿನಲ್ಲಿ ಕಬ್ಬು ಅರೆಯುವ ಸಾಮರ್ಥ್ಯವನ್ನು 2500 ಟಿ.ಸಿ.ಡಿಯಿಂದ 5000 ಟಿ.ಸಿ.ಡಿ.ಗೆ ವಿಸ್ತರಿಸಲಾಗಿದೆ ಹಾಗೂ 13 ಮೆ.ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಈ ಕಾರ್ಖಾನೆಯು ಹೊಂದಿರುತ್ತದೆ.

ಸದರಿ ಕಾರ್ಖಾನೆಯು 200 ಎಕರೆ ಜಮೀನನ್ನು ಒಳಗೊಂಡು ಅಂದಾಜು ರೂ.204.26 ಕೋಟಿಗಳ ಮೌಲ್ಯದ ಸ್ಥಿರ ಮತ್ತು ಚರಾಸ್ತಿಗಳನ್ನು ಹೊಂದಿರುತ್ತದೆ. ಈ ಕಾರ್ಖಾನೆಯು ಒಟ್ಟು 19493 ಸದಸ್ಯರನ್ನು ಹೊಂದಿದ್ದು, ಒಟ್ಟು ಷೇರು ಬಂಡವಾಳ ರೂ. 25.88 ಕೋಟಿಗಳಾಗಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಷೇರು ಬಂಡವಾಳ ರೂ.12.72 ಕೋಟಿಗಳು ಮತ್ತು ಸದಸ್ಯರ ಷೇರು ಬಂಡವಾಳ ರೂ. 13.16 ಕೋಟಿಗಳಾಗಿರುತ್ತದೆ.

2019-20ನೇ ಸಾಲಿನವರೆಗೆ ಈ ಕಾರ್ಖಾನೆಯಲ್ಲಿ ಒಟ್ಟು 151.62 ಕೋಟಿಗಳ ಕ್ರೋಢೀಕೃತ ನಷ್ಟ ಸಂಭವಿಸಿರುತ್ತದೆ. ಪ್ರಸ್ತುತ ಕಾರ್ಖಾನೆಯು ವಿವಿಧ ಹಣಕಾಸು ಸಂಸ್ಥೆಗಳಿಗೆ ಪಾವತಿಸಬೇಕಾಗಿರುವ ಸಾಲ ಮತ್ತು ಜವಾಬ್ದಾರಿಗಳ ಮೊತ್ತ ಪ್ರಸ್ತುತ ರೂ. 333.94 ಕೋಟಿಗಳಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ಹಣಕಾಸು ಸಂಸ್ಥೆಗಳ ಹೆಸರು | ಅಸಲು ಮೊತ್ತ | ಬಡ್ಡಿ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1 | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು. | 76.89 | 14.11 | 91.00 |
| 2 | ಬಿ.ಡಿ.ಸಿ.ಸಿ. ಬ್ಯಾಂಕ್, ಬಾಗಲಕೋಟೆ | 79.06 | 14.71 | 93.77 |
| 3 | ಹುಡ್ಕೋ, ಬೆಂಗಳೂರು. | 3.08 | 1.86 | 4.94 |
| 4 | ಬ್ಯಾಂಕ್ ಆಫ್ ಇಂಡಿಯ, ಮುಧೋಳ | 50.10 | 16.76 | 66.86 |
| 5 | ರಾಜ್ಯ ಸರ್ಕಾರದ ಸಾಲ | 20.83 | – | 20.83 |
| 6 | ನೌಕರರ/ಕಾರ್ಮಿಕರ ವೇತನ ಮತ್ತು ಭತ್ಯೆಗಳು | 10.63 | – | 10.63 |
| 7 | ಶಾಸನಬದ್ಧ ಪಾವತಿಗಳು | 1.21 | – | 1.21 |
| 8 | ಇತರೆ ಜವಾಬ್ದಾರಿಗಳು | 44.70 | – | 44.70 |
| | ಒಟ್ಟು ಮೊತ್ತ | 286.50 | 47.44 | 333.94 |

.....2

ಕಾರ್ಖಾನೆಯು ಆರ್ಥಿಕ ನಷ್ಟ ಹಾಗೂ ದುಡಿಯುವ ಬಂಡವಾಳದ ಕೊರತೆಯಿಂದಾಗಿ 2020-21ನೇ ಸಾಲಿನಲ್ಲಿ ಕಬ್ಬು ನುರಿಸುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ. ಆದ್ದರಿಂದ ದಿನಾಂಕ:17.08.2020ರಂದು ಜರುಗಿದ ಕಾರ್ಖಾನೆಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮತ್ತು ದಿನಾಂಕ: 12.09.2020 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ಕಬ್ಬು ಬೆಳೆಗಾರರ ರೈತರ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಸದರಿ ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡುವ ಮೂಲಕ ಪುನಶ್ಚೇತನಗೊಳಿಸಲು ದಿನಾಂಕ:22.10.2020ರ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ, ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ: 27.10.2020ರಲ್ಲಿ ಸರ್ಕಾರದ ಅನುಮತಿ ನೀಡಲಾಗಿದೆ.

ಅದರಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ರನ್ವಯ ದಿನಾಂಕ:02.11.2020ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್ ವೇಳಾಪಟ್ಟಿ ಮತ್ತು ಪತ್ರಿಕಾ ಪ್ರಕಟಣೆಯಂತೆ ನಿಗದಿಪಡಿಸಿದ ಕಾಲಮಿತಿಯಲ್ಲಿ ಏಕವ್ಯಕ್ತಿ ಬಿಡ್‌ದಾರರಾದ ಮೆ॥ ನಿರಾಣಿ ಶುಗರ್ಸ್ ಲಿ., ಮುಧೋಳ ಇವರು ಮಾತ್ರ ಬಿಡ್ ಸಲ್ಲಿಸಿದ್ದರು. ದಿನಾಂಕ:20.11.2020 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಮೆ॥ ನಿರಾಣಿ ಶುಗರ್ಸ್ ಲಿ., ಮುಧೋಳ ಇವರು ಸಲ್ಲಿಸಿರುವ ಬಿಡ್‌ನ್ನು ತಾಂತ್ರಿಕ ಪರಿಶೀಲನಾ ಸಮಿತಿಯಲ್ಲಿ ಅರ್ಹವೆಂದು ಪರಿಗಣಿಸಲಾಗಿರುತ್ತದೆ.

ದಿನಾಂಕ:21.11.2020 ರಂದು ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ, ಮೆ॥ ನಿರಾಣಿ ಶುಗರ್ಸ್ ಲಿ., ಮುಧೋಳ ಇವರು 40 ವರ್ಷಗಳ ಅವಧಿಗೆ ರೂ.315.00 ಕೋಟಿಗಳ ಬಿಡ್ ಮೊತ್ತವನ್ನು ಸಲ್ಲಿಸಿದ್ದು, ಇದರ ಎನ್.ಪಿ.ವಿ. ಮೌಲ್ಯ ರೂ.82.70 ಕೋಟಿಗಳಾಗಿರುತ್ತದೆ. ಮೆ॥ನಿರಾಣಿ ಶುಗರ್ಸ್ ಲಿ., ಮುಧೋಳ ಇವರು ಸಲ್ಲಿಸಿರುವ ಆರ್ಥಿಕ ಬಿಡ್‌ನ್ನು ಅನುಮೋದನೆಗಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ:24.11.2020 ರಂದು ಸರ್ಕಾರಕ್ಕೆ ಸಲ್ಲಿಸಿದ್ದರು.

ಈ ಕಾರ್ಖಾನೆಯ ಸಾಲ ಮತ್ತು ಬಡ್ಡಿಯನ್ನು ಸಮರ್ಥವಾಗಿ ನಿಗದಿತ ಅವಧಿಯಲ್ಲಿ ಮರುಪಾವತಿಸುವ ಮತ್ತು ಜವಾಬ್ದಾರಿಗಳನ್ನು ನಿಭಾಯಿಸುವ ದೃಷ್ಟಿಯಿಂದ ಮೆ॥ ನಿರಾಣಿ ಶುಗರ್ಸ್ ಲಿ., ಮುಧೋಳ ಇವರೊಂದಿಗೆ ಸೂಕ್ತ ದರ ಸಂಧಾನ ನಡೆಸಿ ಸರ್ಕಾರಕ್ಕೆ ಮರು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸರ್ಕಾರದ ದಿನಾಂಕ: 08.12.2020ರ ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳು ಮತ್ತು ಬಿಡ್‌ದಾರರೊಂದಿಗೆ ದಿನಾಂಕ:15.12.2020ರಂದು ದರ ಸಂಧಾನ ಸಭೆಯನ್ನು ನಡೆಸಿರುತ್ತಾರೆ. ಬಿಡ್‌ದಾರರು ಗುತ್ತಿಗೆ ಮೊತ್ತವನ್ನು ರೂ.345.00 ಕೋಟಿಗಳಿಗೆ ಹೆಚ್ಚಿಸಿ ಒಪ್ಪಿಗೆ ಪತ್ರ ನೀಡಿದ್ದು, ಇದರ ಎನ್.ಪಿ.ವಿ. ಮೌಲ್ಯ ರೂ.85.70 ಕೋಟಿಗಳಾಗಿರುತ್ತದೆ.

ಆದರೆ, ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಲು ರೂ.489.79 ಕೋಟಿಗಳ ಬಿಡ್ ಮೊತ್ತ ಅಗತ್ಯವಿರುವುದಾಗಿ ಅಧ್ಯಕ್ಷರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಇವರು ಕೋರಿದ್ದರು. ಈ ಹಿನ್ನೆಲೆಯಲ್ಲಿ ಬಿಡ್‌ದಾರರು ನೀಡಿರುವ ಪರಿಷ್ಕೃತ ಬಿಡ್ ಮೊತ್ತ ರೂ. 345.00 ಕೋಟಿಗಳಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಲು ಸಾಧ್ಯವಾಗದೇ ಇರುವುದರಿಂದ ಪುನ: ದರ ಸಂಧಾನ ನಡೆಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ದಿನಾಂಕ: 25.05.2021 ಮತ್ತು 05.08.2021ರ ಪತ್ರಗಳಲ್ಲಿ ಸರ್ಕಾರದಿಂದ ನಿರ್ದೇಶನ ನೀಡಲಾಗಿತ್ತು.

ಈ ಕಾರ್ಖಾನೆಗೆ ಸಾಲ ನೀಡಿರುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು, ಡಿ.ಸಿ.ಸಿ. ಬ್ಯಾಂಕ್ ಬಾಗಲಕೋಟೆ ಮತ್ತು ಬ್ಯಾಂಕ್ ಆಫ್ ಇಂಡಿಯ, ಮುಧೋಳ, ಈ 3 ಬ್ಯಾಂಕುಗಳು ಸಾಲ ವಸೂಲಾತಿ ಸಂಬಂಧ ಕಾರ್ಖಾನೆಯ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ.

ಕಾರ್ಖಾನೆಯ ಕಾರ್ಮಿಕರಿಗೆ ನವೆಂಬರ್ ಮತ್ತು ಡಿಸೆಂಬರ್ 2020ರ ಮಾಹೆಗಳ ವೇತನ ನೀಡುವುದು ಬಾಕಿ ಇರುತ್ತದೆ. ಜನವರಿ 2021 ರಿಂದ 28 ಜನ ಅವಶ್ಯಕ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದ ಸಿಬ್ಬಂದಿ/ ಕಾರ್ಮಿಕರಿಗೆ ಲೇ-ಆಫ್ ಘೋಷಣೆ ಮಾಡಲಾಗಿರುತ್ತದೆ.

ಕಾರ್ಖಾನೆಯನ್ನು ಪ್ರಾರಂಭಿಸುವಂತೆ, ಕಾರ್ಮಿಕರ/ ಸಿಬ್ಬಂದಿಗಳ ಹಿಂಬಾಕಿಯನ್ನು ಪಾವತಿಸುವಂತೆ ಹಾಗೂ ಇನ್ನಿತರೆ ಬೇಡಿಕೆಗಳನ್ನು ಇಟ್ಟು ಕಾರ್ಮಿಕರು ಮತ್ತು ರೈತರು ಕಳೆದ 45 ದಿನಗಳಿಂದ ತಹಶೀಲ್ದಾರ್, ಮುಧೋಳ ತಾಲ್ಲೂಕು ಇವರ ಕಛೇರಿಯ ಮುಂದೆ ಅನಿರ್ದಿಷ್ಟಾವಧಿ ಧರಣಿ ಕೈಗೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ, 2021-22ನೇ ಹಂಗಾಮಿನಿಂದ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸುವುದು ಅನಿವಾರ್ಯವಾಗಿರುವುದರಿಂದ ಹಾಗೂ ಪ್ರಸ್ತುತ ನಡೆದಿರುವ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಲು ಸಾಧ್ಯವಾಗದೇ ಇರುವುದರಿಂದ ಮರುಟೆಂಡರ್ ಪ್ರಕ್ರಿಯೆ ನಡೆಸಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಲು ದಿನಾಂಕ: 07.08.2021ರಂದು ಜರುಗಿದ ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

ದಿನಾಂಕ: 08.07.2021 ಮತ್ತು 20.07.2021ರಂದು ಜರುಗಿದ ದರ ಸಂಧಾನ ಸಭೆಗಳು ಫಲಪ್ರದವಾಗಿರುವುದಿಲ್ಲವೆಂದು ತಿಳಿಸುತ್ತಾ, ಕಾರ್ಖಾನೆಯ ಆಡಳಿತ ಮಂಡಳಿಯ ನಿರ್ಣಯದಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ:11.08.2021 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಏಕವ್ಯಕ್ತಿ ಬಿಡ್‌ದಾರರಾದ ಮೆ॥ ನಿರಾಣಿ ಶುಗರ್ಸ್ ಲಿ., ಮುಧೋಳ ಇವರು ನಮೂದಿಸಿರುವ ಪರಿಷ್ಕೃತ ಗುತ್ತಿಗೆ ಮೊತ್ತ ರೂ.345.00 ಕೋಟಿಗಳಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ತೀರುವಳಿ ಮಾಡಲು ಸಾಧ್ಯವಾಗದೇ ಇರುವುದರಿಂದ ಸದರಿ ಬಿಡ್‌ನ್ನು ತಿರಸ್ಕರಿಸಿ, ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ: 02.11.2020 ರಂದು ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಿ ಹಾಗೂ 2021-22ನೇ ಹಂಗಾಮಿನಲ್ಲಿ ಕಬ್ಬು ನುರಿಸುವುದಕ್ಕಾಗಿ ಕಾರ್ಖಾನೆಯನ್ನು

.....4

ಪ್ರಾರಂಭಿಸುವುದು ಅಗತ್ಯವಿರುವುದರಿಂದ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡಲು ಹೊಸದಾಗಿ ಟೆಂಡರ್ ಕರೆಯುವುದಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ: 24.08.2021 ರಲ್ಲಿ ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ಅದರಂತೆ, ಸದರಿ ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ಕುರಿತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ದಿನಾಂಕ: 08.09.2021 ರಂದು ದಿನಪತ್ರಿಕೆಗಳಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ನೀಡಲಾಗಿದೆ. ಟೆಂಡರ್ ವೇಳಾಪಟ್ಟಿಯಂತೆ ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 08.10.2021 ಎಂದು ನಿಗದಿಗೊಳಿಸಲಾಗಿದೆ. ಪ್ರೀಬಿಡ್ ಸಭೆಯನ್ನು ದಿನಾಂಕ: 16.09.2021, ತಾಂತ್ರಿಕ ಬಿಡ್‌ಗಳಿಗೆ ಸಂಬಂಧಿಸಿದ ಟೆಂಡರ್‌ಅನ್ನು ತೆರೆಯುವ ದಿನಾಂಕ: 11.10.2021 ಹಾಗೂ ಹಣಕಾಸು ಬಿಡ್‌ಗಳಿಗೆ ಸಂಬಂಧಿಸಿದ ಟೆಂಡರ್‌ಅನ್ನು ತೆರೆಯುವ ದಿನಾಂಕ: 12.10.2021ಎಂದು ನಿಗದಿಗೊಳಿಸಲಾಗಿದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ರಾಜ್ಯದಲ್ಲಿ ಕೆಲವೊಂದು ಸಹಕಾರಿ ಸಕ್ಕರೆ ಕಾರ್ಖಾನೆಗಳು ಆರ್ಥಿಕ ದುಸ್ಥಿತಿ ಮತ್ತು ಇತರೆ ಆಡಳಿತಾತ್ಮಕ ಕಾರಣಗಳಿಂದಾಗಿ ಸ್ಥಗಿತಗೊಂಡಿರುತ್ತವೆ. ಇಂತಹ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳೆಗಾರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ. ರಾಜ್ಯದಲ್ಲಿ ಈವರೆವಿಗೂ ಇಂತಹ 8 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸಲಾಗಿರುತ್ತದೆ.

---

ಸಿಐ 261 ಸಿಓಎಫ್ 2021

(ಶಂಕರ್.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

## ಕರ್ನಾಟಕ ವಿಧಾನ ಪರಿಷತ್ತು

ರಾಜ್ಯದ ಗ್ರಾಮೀಣ ಭಾಗದಲ್ಲಿ ಪ್ರಥಮ ಚಿಕಿತ್ಸಕರು ಅಧಿಕೃತ ಪದವಿ ಪಡೆದ ನುರಿತ ವೈದ್ಯರ ಆಸ್ಪತ್ರೆಗಳಲ್ಲಿ ಸುಮಾರು 5 ರಿಂದ 10 ವರ್ಷಗಳ ಕಾಲ ಪ್ರಥಮೋಪಚಾರದ ಅನುಭವವನ್ನು ಪಡೆದು ಅವರ ಮಾರ್ಗದರ್ಶನದಲ್ಲಿ ಹಾಗೂ ಗ್ರಾಮ ಪಂಚಾಯಿತಿಯಲ್ಲಿ ಅನುಮತಿ ಪಡೆದು ಗ್ರಾಮೀಣ ಭಾಗದಲ್ಲಿ ಪ್ರಥಮ ಚಿಕಿತ್ಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ 2007ರ ಕರ್ನಾಟಕ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ಪ್ರಕಾರ ಸರ್ಕಾರವು ಗ್ರಾಮೀಣ ಪ್ರಥಮ ಚಿಕಿತ್ಸಕರನ್ನು ನಕಲಿಗಳೆಂದು ಪರಿಗಣಿಸಿ ಇವರ ಸೇವೆಯನ್ನು ತಡೆಹಿಡಿದಿರುತ್ತಾರೆ. ಈ ಕಾರಣದಿಂದ ಬಹುತೇಕ ಗ್ರಾಮೀಣ ಭಾಗಗಳಲ್ಲಿ ಸರಿಯಾದ ವೈದ್ಯಕೀಯ ಸೌಲಭ್ಯ ಸಾರಿಗೆ ಸೌಲಭ್ಯಗಳಿಲ್ಲದ ಗ್ರಾಮಗಳಲ್ಲಿ ಇವರುಗಳು ಸಾಮಾನ್ಯ ಖಾಯಿಲೆಗಳಾದ ನೆಗಡಿ, ಕೆಮ್ಮು, ಜ್ವರ ಇಂತಹ ಖಾಯಿಲೆಗಳಿಗೆ ಸಾಮಾನ್ಯ ನೋವು ಹಾಗೂ ನಂಜು ನಿವಾರಕ ಚುಚ್ಚು ಮದ್ದು ನೀಡಿ ಪ್ರಥಮ ಹಂತದ ಮಾತ್ರೆಗಳನ್ನು ಬರೆದುಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ನುರಿತ ವೈದ್ಯರ ಬಳಿ ಕಳುಹಿಸಿಕೊಡುವ ಕೆಲಸ ಸಂಪೂರ್ಣವಾಗಿ ನಿಂತು ಹೋಗಿರುತ್ತದೆ. ಗ್ರಾಮೀಣ ಭಾಗಗಳಲ್ಲಿ ಜನರ ಆರೋಗ್ಯದ ಕಾಳಜಿಯನ್ನು ಕಾಪಾಡುವ ನಿಟ್ಟಿನಲ್ಲಿ ಗ್ರಾಮೀಣ ಪ್ರಥಮ ಚಿಕಿತ್ಸಕರಿಗೆ ತೆಲಂಗಾಣ ಹಾಗೂ ಸೀಮಾಂಧ್ರ ರಾಜ್ಯದ ಮಾದರಿಯಂತೆ ಸೂಕ್ತ ತರಬೇತಿ (ಎಲ್.ಎಂ.ಪಿ)ಯನ್ನು ನೀಡಿ ಇವರಿಗೆ ಮಾನ್ಯತೆಯನ್ನು ನೀಡಿ, ಇವರ ಸೇವೆಯನ್ನು ಮುಂದುವರೆಸುವ ಕುರಿತು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್. ಪಾಟೀಲ್ ರವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ;

*******

ಕರ್ನಾಟಕ ಖಾಸಗೀ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ರ ಪ್ರಕಾರ "ವೈದ್ಯವೃತ್ತಿಗ" ಎಂದರೆ, ವೈದ್ಯ ವೃತ್ತಿಗನು ತಾನು ವ್ಯಾಸಂಗ ಮಾಡಿದ, ಅರ್ಹತೆ ಪಡೆದ ಮತ್ತು ನೋಂದಯಿತನಾದ ವೈದ್ಯ ಪದ್ಧತಿಯಲ್ಲಿ ವೃತ್ತಿ ನಡೆಸುವುದಕ್ಕಾಗಿ ಹೋಮಿಯೋಪತಿ ವೃತ್ತಿಗರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 35), ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಅಥವಾ ಯೋಗ ವೈದ್ಯವೃತ್ತಿಗರ ನೋಂದಣಿ ಮತ್ತು ವೈದ್ಯವೃತ್ತಿಗರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 9) ವೈದ್ಯಕೀಯ ನೋಂದಣಿ ಅಧಿನಿಯಮ, (1961 (1961ರ ಕರ್ನಾಟಕ ಅಧಿನಿಯಮ 34) ಭಾರತೀಯ ವೈದ್ಯಕೇಂದ್ರ ಪರಿಷತ್ತು ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 48) ಹೋಮಿಯೋಪತಿ ಕೇಂದ್ರ ಪರಿಷತ್ತು ಅಧಿನಿಯಮ, 1978 (1973ರ ಕೇಂದ್ರ ಅಧಿನಿಯಮ 59) ಮತ್ತು ವೈದ್ಯ ಪರಿಷತ್ತು ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 102) ಇವುಗಳಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿ ಮತ್ತು ದಂತ ವೈದ್ಯರುಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ನೋಂದಾಯಿತನಾದ ಒಬ್ಬ ದಂತ ವೈದ್ಯನನ್ನೂ ಇದು ಒಳಗೊಳ್ಳುತ್ತದೆ.

ಕರ್ನಾಟಕ ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಥಮ ಚಿಕಿತ್ಸೆಯನ್ನು ಸಾರ್ವತ್ರಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಉಚಿತವಾಗಿ ನೀಡಲು ಕ್ರಮವಹಿಸುತ್ತಿದೆ. ಸದರಿ ಕಾರ್ಯಕ್ರಮದಲ್ಲಿ ಪ್ರತೀ ಉಪಕೇಂದ್ರ ಮಟ್ಟದಲ್ಲಿ 3000-5000 ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು ತೆರೆಯುತ್ತಿದ್ದು, ಇದರಲ್ಲಿ ಬಿ.ಎಸ್ಸಿ ಪದವೀಧರ (4 ವರ್ಷದ ಪದವಿ) ಶುಶ್ರೂಷಕರನ್ನು 6 ತಿಂಗಳ ಸಮುದಾಯ

ಆರೋಗ್ಯ ಶುಶ್ರೂಷಕ ತರಬೇತಿಯನ್ನು ಹೆಚ್ಚುವರಿಯಾಗಿ ನೀಡಿ ಸಮುದಾಯ ಆರೋಗ್ಯ ಅಧಿಕಾರಿಗಳನ್ನಾಗಿ ಉಪಕೇಂದ್ರಗಳಲ್ಲಿ ನಿಯುಕ್ತಿಗೊಳಿಸಲಾಗುತ್ತಿದೆ. ಸದರಿ ಸಮುದಾಯ ಆರೋಗ್ಯ ಅಧಿಕಾರಿಗಳು, ಕಿರಿಯ ಆರೋಗ್ಯ ಸಹಾಯಕರು (ಮಹಿಳೆ ಹಾಗೂ ಪುರುಷ) ಗಳೊಂದಿಗೆ ಸೇರಿ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಸಮುದಾಯದ ಮನೆ ಬಾಗಿಲಿಗೆ ತಲುಪಿಸುತ್ತಿದ್ದು, ಈ ಆರೋಗ್ಯ ಸೇವೆಗಳಲ್ಲಿ ಪ್ರಥಮ ಚಿಕಿತ್ಸೆ, ರೆಫರಲ್ ಸೇವೆಗಳು, ಅನುಸರಣೆ ಸೇವೆಗಳು, ಟೆಲಿ ಮೇಡಿಸಿನ್/ಟೆಲಿ ಕನ್ಸಲ್‌ಟೇಷನ್ ಹಾಗೂ ಉಪಶಾಮಕ ಆರೈಕೆಯನ್ನು ನೀಡಲಾಗುತ್ತಿದ್ದು, ಗುಣಾತ್ಮಕ ಮತ್ತು ಸಮಯೋಚಿತವಾಗಿ ಹೊಣೆಗಾರಿಕೆಯಿಂದ ಸೇವೆಗಳನ್ನು ನೀಡುವ ಗುರುತರ ಜವಾಬ್ದಾರಿಯನ್ನು ಸಮುದಾಯ ಆರೋಗ್ಯ ಅಧಿಕಾರಿಗಳು ಹೊಂದಿರುತ್ತಾರೆ. ರಾಜ್ಯದಲ್ಲಿ ಈಗಾಗಲೇ 3339 ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಂಡು ಸದರಿ ಉಪಕೇಂದ್ರ ಮಟ್ಟದಲ್ಲೇ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 2859 ಸಮುದಾಯ ಆರೋಗ್ಯ ಅಧಿಕಾರಿಗಳನ್ನು ಹೆಚ್ಚುವರಿಯಾಗಿ ನೇಮಕಾತಿ ಮಾಡಿಕೊಂಡು, ಒಟ್ಟು 6198 ಉಪಕೇಂದ್ರಗಳಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಸ್ಥಾಪಿಸಿ, ಗ್ರಾಮಾಂತರ ಹಾಗೂ ಕ್ಲಿಷ್ಟಕರ ಪ್ರದೇಶಗಳಲ್ಲಿ ಉಚಿತವಾಗಿ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ಸದರಿ 6198 ಉಪಕೇಂದ್ರ ಮಟ್ಟದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು, 2228 ಪ್ರಾಥಮಿಕ ಆರೋಗ್ಯ ಕೇಂದ್ರಗಳೊಂದಿಗೆ ಸೇರಿ ಸಾರ್ವಜನಿಕರಿಗೆ ಸಮುದಾಯ ಹಂತದಲ್ಲೇ ಸಮಗ್ರ ಆರೋಗ್ಯ ಸೇವೆಗಳನ್ನು ನೀಡಲು ಕ್ರಮವಹಿಸುತ್ತಿವೆ. ಎಲ್ಲಾ ಪ್ರಾಥಮಿಕ ಹಂತದ ಆರೋಗ್ಯ ಸೇವೆಗಳನ್ನು ಉಚಿತವಾಗಿ ಸರ್ಕಾರವೇ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕದಡಿಯಲ್ಲಿ ನೀಡುತ್ತಿರುವುದರಿಂದ, ಸಾರ್ವಜನಿಕರಿಗೆ ಪ್ರಾಥಮಿಕ ಹಂತದಲ್ಲಿ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಯಾಗುತ್ತಿಲ್ಲ.

ತೆಲಂಗಾಣ ಮತ್ತು ಸೀಮಾಂಧ್ರ ರಾಜ್ಯಗಳ ಮಾದರಿಯಲ್ಲಿ ನುರಿತ ವೈದ್ಯರ ಆಸ್ಪತ್ರೆಗಳಲ್ಲಿ ಸುಮಾರು 5 ರಿಂದ 10 ವರ್ಷಗಳ ಕಾಲ ಪ್ರಥಮೋಪಚಾರದ ಅನುಭವವನ್ನು ಪಡೆದ ಪ್ರಥಮ ಚಿಕಿತ್ಸಕರಿಗೆ ಗ್ರಾಮೀಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಥಮ ಚಿಕಿತ್ಸೆ ನೀಡುವ ಸಲುವಾಗಿ ತರಬೇತಿ ನೀಡಿ ಮುಂದುವರೆಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದುದರಿಂದ ಕೆ.ಪಿ.ಎಂ.ಇ. ಅಧಿನಿಯಮದ ಅಡಿಯಲ್ಲಿ ಪ್ರಥಮ ಚಿಕಿತ್ಸಕರ ನೋಂದಣಿ ಹಾಗೂ ಮಾನ್ಯತೆಗೆ ಅವಕಾಶವಿರುವುದಿಲ್ಲ.

(ಡಾ. ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ: ಆಕುಕ 28 ಹೆಚ್‌ಪಿಸಿ 2021